

ದಿನಾಂಕ: 22-02-2024 ರಂದು ಅಧಿವೇಶನದ ಬಿಡುವಿನ ಸಂದರ್ಭದಲ್ಲಿ ಮಾನ್ಯ ಸಭಾಪತಿ **ಶ್ರೀ ಬಸವರಾಜ ಹೊರಟ್ಟಿ** ಅವರ ಕಚೇರಿಗೆ ಗೌರವಾನ್ವಿತ ಮುಖ್ಯಮಂತ್ರಿಗಳಾದ **ಸಿದ್ದರಾಮಯ್ಯನವರು** ಸಹಜ ಭೇಟಿ ನೀಡಿ **ಆತ್ಮೀಯತೆಯಿಂದ ಕುಶಲೋಪರಿಗಳನ್ನು** ಹೊರಟ್ಟಿಯವರೊಂದಿಗೆ ಹಂಚಿಕೊಂಡರು. ಹೊರಟ್ಟಿ ಅವರ ಮತ್ತು ತಮ್ಮ ನಾಲ್ಕು ದಶಕಗಳ ಸುದೀರ್ಘ ಸ್ನೇಹ ಸಂಬಂಧದ ಹಲವಾರು ಮಜಲುಗಳನ್ನ ಹಾಗೂ ಸಂಗತಿಗಳನ್ನು ಮುಖ್ಯಮಂತ್ರಿಗಳು ಮೆಲಕು ಹಾಕಿದರು. ಹೊರಟ್ಟಿಯವರು ಸಹ ಹಲವಾರು ಮಹತ್ವದ ವಿಷಯಗಳನ್ನ ನೆನಪಿಸಿ ಹಾಸ್ಯ ಚಟಾಕಿ ಹಾರಿಸಿದರು. ಇಬ್ಬರೂ ಗೌರವಾನ್ವಿತರು ತಮ್ಮ ಸಾಕಷ್ಟು ಆಡಳಿತಾತ್ಮಕ ಒತ್ತಡದ ಮಧ್ಯೆಯು ಕೆಲ ಸಮಯವನ್ನ ಸಂತಸದಿಂದ ಕಳೆದರು.

ಈ ಸಂದರ್ಭದಲ್ಲಿ ಸಭಾಪತಿ ಅವರ ವಿಶೇಷ ಕರ್ತವ್ಯಾಧಿಕಾರಿ ಡಾ. ಮಹೇಶ್ ವಾಳ್ವೇಕರ್ ಹಾಗೂ ಆಪ್ತ ಕಾರ್ಯದರ್ಶಿ ಶ್ರೀಮತಿ ಕೆ.ಡಿ .ಶೈಲಾ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.